## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್.104/2019

ಸಾಕ್ಷಿಯನ್ನು ದಿಃ **05.12.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ ಎಲ್ ಎನ್ ವಕೀಲರಿಂದಃ-**

ನಮ್ಮ ಕುಟುಂಬದ ವಂಶವೃಕ್ಷದ ಬಗ್ಗೆ ಪ್ರಮಾಣ ಪತ್ರವನ್ನು ನಿಪಿ-4 ಎಂದು, ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಿಪಿ -5 ಎಂದು , ಸರ್ವೆ ನಂ. 217/1ರ ಕಂಪ್ಯೂಟರ್ ಪಹಣಿಯನ್ನು ನಿಪಿ-6 ಎಂದು, ಸರ್ವೆ ನಂ. 217 ರ ಪಹಣಿಯ 3 ದೃಢೀಕೃತ ನಕಲುಗಳನ್ನು ನಿಪಿ-7 ರಿಂದು ನಿಪಿ-9 ಎಂದು ಗುರುತಿಸಲಾಯಿತು. ಸರ್ವೆ ನಂ. 217/1 ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿಯಲ್ಲಿ ವಿಭಾಗವಾದಾಗ ಬಂದಿರುತ್ತದೆ.

**ಪಾಟೀ ಸವಾಲುಃ 1ನೇ ಪ್ರತಿವಾದಿಯ ಪರ ಶ್ರೀ ಎಂ ಬಿ ಸಿ ವಕೀಲರಿಂದಃ**

1ನೇ ಪ್ರತಿವಾದಿ ಹಾಗೂ ಅವರ ವಕೀಲರನ್ನು ಕರೆಯಲಾಯಿತು ಗೈರುಹಾಜರಿ ಆದ್ದರಿಂದ 1ನೇ ಪ್ರತಿವಾದಿಯ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 2, 4 ಮತ್ತು 5ನೇ ಪ್ರತಿವಾದಿಯರ ಪರ ಶ್ರೀ ಕೆ ಆರ್ ಜಿ ವಕೀಲರಿಂದಃ**

2 , 4 ಮತ್ತು 5ನೇ ಪ್ರತಿವಾದಿಯರನ್ನು ಹಾಗೂ ಅವರ ವಕೀಲರನ್ನು ಕರೆಯಲಾಯಿತು, ಗೈರು ಹಾಜರಿ , ಪ್ರತಿವಾದ ಪತ್ರ ಸಲ್ಲಿಸಿಲ್ಲ ಆದ್ದರಿಂದ 2 , 4 ಮತ್ತು 5ನೇ ಪ್ರತಿವಾದಿಯರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 3ನೇ ಪ್ರತಿವಾದಿಯ ಪರ ಶ್ರೀ ಬಿ ಎಸ್ ವೈ ಪರ ಶ್ರೀ ಆರ್ ಕೆ ಆರ್ ವಕೀಲರಿಂದಃ**

3ನೇ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ 3ನೇ ಪ್ರತಿವಾದಿಯ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 6ನೇ ಪ್ರತಿವಾದಿ ಪರಃ**

6ನೇ ಪ್ರತಿವಾದಿ ಏಕ ಪಕ್ಷೀಯರಾಗಿದ್ದು ಆದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು